**a. i) ಕವಿತ, ಸವಿತ ನಿಜವಾದ ಗೆಳತಿಯರು?**

**ii) ಏಕೆ?**

**b. i) ಯಾವ ಯಾವ ವಿಧದ ಗೆಳತಿಯರು ಇರುತ್ತಾರೆ?**

**ii) ಕವಿತ ಯಾವ ವಿಧದ ಗೆಳತಿ?**

**c. ಕವಿತಳಿಗೆ ನಿನ್ನ ಸಲಹೆ ಏನು?**

2. ಕಿಶೋರ್ ಮತ್ತು ಕುಮಾರ್ 10ನೇ ತರಗತಿಯ ವಿದ್ಯಾರ್ಥಿಗಳು. ತರಗತಿಯ ಶಿಕ್ಷಕರು ಇಬ್ಬರಿಗೂ ಅತ್ಯುತ್ತಮ ಶ್ರೇಣಿಯಲ್ಲಿ ಪಾಸಾಗುವಂತೆ ಕರೆಕೊಟ್ಟಿರುತ್ತಾರೆ. ಮಾತ್ರವಲ್ಲ ದಿನ ನಿತ್ಯದ ಅಭ್ಯಾಸಕ್ಕೆ ವೇಳಾ ಪಟ್ಟಿಯನ್ನು ಮಾಡಲು ತಿಳಿಸುತ್ತಾರೆ. ಕಿಶೋರ್ ದಿನನಿತ್ಯದ ವೇಳಾ ಪಟ್ಟಿಯಂತೆ ನಿಷ್ಠೆಯಿಂದ ಅಭ್ಯಾಸ ಮಾಡುತ್ತಿರುವ ಹೊತ್ತಿಗೆ ಕುಮಾರ ಅವನ ಮನೆಗೆ ಬಂದು ತನ್ನೊಂದಿಗೆ ಆಟಕ್ಕೆ ಬರುವಂತೆ ಒತ್ತಾಯಿಸುತ್ತಾನೆ. ಮಾತ್ರವಲ್ಲ ಅತ್ಯುತ್ತಮ ಶ್ರೇಣಿಯಲ್ಲಿ ಪಾಸಾಗಲು ವರ್ಷವಿಡಿ ಕಲಿಯುವ ಅಗತ್ಯವಿಲ್ಲ ಇಡೀ ವರ್ಷದ ಪಾಠಗಳನ್ನು ಕೊನೇಯ ಒಂದೇ ತಿಂಗಳಲ್ಲಿ ಕಲಿಯಬಹುದು ಮತ್ತು ಅಗತ್ಯ ಬಿದ್ದಲ್ಲಿ ನಕಲು ಮಾಡಿ ಅತ್ಯುತ್ತಮ ಶ್ರೇಣಿಯಲ್ಲಿ ಪಾಸಾಗಬಹುದೆಂದು ತಿಳಿಸುತ್ತಾನೆ.

**a. i) ಕುಮಾರನ ಅಭಿಪ್ರಾಯ ಸರಿಯೇ?**

**ii) ಏಕೆ?**

**b. i) ಕುಮಾರನ ಅಭಿಪ್ರಾಯದಂತೆ ಅವನಿಗೆ ಅತ್ಯುತ್ತಮ ಶ್ರೇಣಿಯಲ್ಲಿ ಪಾಸಾಗಲು ಸಾಧ್ಯವಾದಿತೇ?**

**ii) ಏಕೆ?**

**c. ಕುಮಾರನಿಗೆ ನಿನ್ನ ಸಲಹೆ ಏನು?**

3. ರವಿಯು 10ನೇ ತರಗತಿಯ ವಿದ್ಯಾರ್ಥಿ. ದಿನನಿತ್ಯ ಶಾಲೆಗೆ ಬಸ್ಸಿನಲ್ಲಿ ಪ್ರಯಾಣಿಸುತ್ತಾನೆ. ಬಸ್ಸಿನಲ್ಲಿ ದುರ್ಬಲರನ್ನು, ಮುದುಕ, ಮುದುಕಿಯರನ್ನು, ಚಿಕ್ಕ ಮಕ್ಕಳನ್ನು ಎತ್ತಿಕೊಂಡ ತಾಯಾಂದಿರನ್ನು ಕಂಡಾಗ ತನ್ನ ಸೀಟನ್ನು ಅವರಿಗೆ ಬಿಟ್ಟುಕೊಡುತ್ತಿದ್ದ. ಆದರೆ ಇತ್ತೀಚಿನ ದಿನಗಳಲ್ಲಿ ಅಂತವರನ್ನು ಬಸ್ಸಿನಲ್ಲಿ ಕಂಡಾಗ ಕಂಡುಕಾಣದಂತೆ ಸೀಟಲ್ಲೆ ಕುಳಿತ್ತಿರುತ್ತಾನೆ.

**a. i) ರವಿಯ ವರ್ತನೆ ಸರಿಯೇ?**

**ii) ಏಕೆ?**

**b. i) ನೀನು ರವಿಯಾಗಿರುತ್ತಿದ್ದರೆ ಏನು ಮಾಡುತ್ತಿದ್ದಿ?**

**ii) ಏಕೆ?**

**a. i) ಇತರರ ಕಷ್ಟಗಳಿಗೆ ನಾವು ಸ್ಪಂದಿಸಬೇಕೇ?**

**ii) ಏಕೆ?**



# ಮಂಗಳೂರು ಧರ್ಮಪ್ರಾಂತ್ಯದ ಮೌಲ್ಯ ಶಿಕ್ಷಣ ಪರೀಕ್ಷೆ

## ಮಂಗಳ ಜ್ಯೋತಿ, ಮಂಗಳೂರು – 575 005

**ದಿನಾಂಕ : 06–01–2018** **ಸಮಯ : $2^1/_2$ ಘಂಟೆ**

**ತರಗತಿ : X** **ಅಂಕ : 80**

**ಸೂಚನೆ:** ಉತ್ತರ ಪತ್ರಿಕೆಯಲ್ಲಿ ***ರಿಜಿಸ್ಟರ್ ನಂಬರ್*** ಮಾತ್ರ ಬರೆಯಿರಿ. ನಿಮ್ಮ ಹೆಸರು ಬರೆಯಬೇಡಿ.

**I. ಆವರಣದಿಂದ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ: 10x1=10**

1. ________ ದಿಂದ ನಮ್ಮನ್ನೇ ಪ್ರತ್ಯೇಕಿಸಿಕೊಂಡರೆ ಸೌಹಾರ್ದ ಸಹಬಾಳ್ವೆ ತೊಡಕಿಗೆ ಸಿಕ್ಕಿಕೊಳ್ಳುತ್ತದೆ.
(ಪರಿಸರ; ಮಾನವ ಕುಟುಂಬ; ಸಮಾಜ)
2. ಸಂವೇದನಾ ಶೀಲತೆ ನಮ್ಮನ್ನು ನಮ್ಮೊಂದಿಗೆ ಮತ್ತು ಇತರರೊಂದಿಗೆ ________ ಕರೆ ಕೊಡುತ್ತದೆ.
(ತುಂಬು ಹೃದಯವಂತರವರಾಗಲು; ಮುಕ್ತ ಕಂಠದವರಾಗಿರಲು; ಮುಕ್ತ ಮನಸ್ಸುಳ್ಳವರಾಗಿರಲು)
3. ________ ನಮ್ಮ ಆಸ್ತಿ. ಅದನ್ನು ನಮ್ಮಿಂದ ಕಸಿದುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ.
(ಸಮಯ; ಹಣ; ವಿದ್ಯೆ)
4. ನಿಷ್ಠೆ ಗೆಳೆತನಕ್ಕೆ ________ ಯನ್ನು ತರುತ್ತದೆ.
(ನಂಬಿಕೆ; ಪ್ರೀತಿ; ಶೋಭೆ)
5. ದೀನತೆ ನಮ್ಮ ವ್ಯಕ್ತಿತ್ವಕ್ಕೆ ತನ್ನತನದ ಮುದ್ರೆಯನ್ನು ಒತ್ತುತ್ತದೆ ಮತ್ತು ನಮ್ಮ ಜೀವನಕ್ಕೆ ________ ತೋರಿಸುತ್ತದೆ.
(ದಿಸೆಯನ್ನು; ಗುರಿಯನ್ನು; ದಾರಿಯನ್ನು)
6. ನಾವೇ ನಮಗೆ ಕೊಡುವ ಜನನ ________
(ಪ್ರೇರಿತ ಜನನ; ಗಳಿಕೆಯ ಜನನ; ಜೈವಿಕ ಜನನ)
7. ಮುಖಂಡ ತನ್ನ ________ ಗಂಭೀರವಾಗಿ ಪರಿಗಣಿಸುತ್ತಾನೆ.
(ಜವಾಬ್ದಾರಿಗಳನ್ನು; ನಿರ್ಧಾರಗಳನ್ನು; ಆದರ್ಶಗಳನ್ನು)
8. ಭೂಲೋಕದ ಎಲ್ಲಾ ಜನರು ________ ವನ್ನು ತುಳಿದದ್ದೇ ಆದರೆ ಜಗಳ, ಕಲಹ, ಭಿನ್ನಭಿಪ್ರಾಯಗಳು ಬಹುಮಟ್ಟಿಗೆ ಇಳಿಮುಖವಾಗುತ್ತಿದ್ದವು.
(ನ್ಯಾಯವಾದ; ಕೋಮುವಾದ; ಸಾರ್ವತ್ರಿಕವಾದ)
9. ಪ್ರತಿ ಮಾನವ ಜೀವಿಗೆ ಘನತೆಯಿಂದ ಜೀವಿಸಲು ________ ಅಗತ್ಯ.
(ಮಾನವ ಹಕ್ಕುಗಳು; ಮಾನವ ಕರ್ತವ್ಯ; ಮಾನವ ಗೌರವ)

10. ನಮ್ಮ ______ ಗಳನ್ನು ಈಡೇರಿಸಿಕೊಳ್ಳಲು ನಾವು ಮಾನವ ಘನತೆಗಾಗಿ ಹಾತೊರೆಯುತ್ತೇವೆ.

(ಕುಂದುಕೊರತೆ; ಆಶೆ ಅಭಿಲಾಷೆ; ಆಶೆ ನಿರಾಶೆ)

**II. ಬಿಟ್ಟಿರುವ ಸ್ಥಳಗಳನ್ನು ಸರಿಯಾದ ಪದಗಳಿಂದ ತುಂಬಿಸಿರಿ: 5x1=5**

1. ಇಂದು ನಾವು __________ ಸಮಾಜದಲ್ಲಿ ಜೀವಿಸುತ್ತಿದ್ದೇವೆ.
2. ಸಂವೇದನಾಶಿಲತೆ ನಮ್ಮ ಜೀವನವನ್ನು __________
3. ಗೆಳೆತನ ಪ್ರಥಮ ಆತ್ಮಿಕವಾದದು, ನಂತರ __________
4. ಮುಖಂಡನಿಗೆ ________ ತಿಳಿದಿರುತ್ತದೆ.
5. ________ ಜೀವನಕ್ಕೆ ಹೊಸತನವನ್ನು ತರುತ್ತದೆ.

**III. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೇ ಪದಕ್ಕೆ ಸರಿ ಸಂಬಂಧ ಹೊಂದುವ ಪದವನ್ನು ಬರೆಯಿರಿ: 5x1=5**

1. ವರ್ಷದ ಬೆಲೆ : **ವಿದ್ಯಾರ್ಥಿ** :: ದಿನದ ಬೆಲೆ : ________
2. ಕೆಲಸಕ್ಕೆ ಸಮಯ : **ಯಶಸ್ಸಿನ ಬೆಲೆ** :: ನಗಲು ಸಮಯ : ________
3. ಅತ್ಯುತ್ತಮ ಆಭರಣ : **ದೀನತೆ** :: ಅತ್ಯುತ್ತಮ ಭದ್ರತೆ : _____
4. ವ್ಯಕ್ತಿಗಳನ್ನು ಸಮಾನರೆಂದು ಗುರುತಿಸುವುದು : **ಸಾಮಾಜಿಕ ಹಕ್ಕು** :: ಇಷ್ಟವುಳ್ಳ ಧರ್ಮದಲ್ಲಿ ನಂಬಿಕೆಯಿಡುವುದು : _______
5. ಪ್ರಾರ್ಥಿಸುವ ಮೊದಲು : **ಕ್ಷಮಿಸು** :: ಸಾಯುವ ಮೊದಲು : ________

**IV. ಹೊಂದಿಸಿ ಬರೆಯಿರಿ: 5x1=5**

| | | |
|---|---|---|
| 1. ದೀನತೆ | – | ಆರೋಗ್ಯಕರ ವ್ಯಕ್ತಿತ್ವ |
| 2. ಗೆಳೆತನ | – | ಸಭ್ಯತೆ |
| 3. ಸ್ವ ಪರಿಜ್ಞಾನ | – | ಪರಿಸರ |
| 4. ಮುಖಂಡನ ಮೂಲ | – | ಭಾದ್ಯತೆ ಕೇಂದ್ರಿಕೃತ |
| 5. ಮಾನವ ಹಕ್ಕುಗಳು | – | ಪರಕೇಂದ್ರಿತ |

**V. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ: 5x1=5**

1. ಸಾಮಾಜಿಕ ಪರಿಜ್ಞಾನ ಎಂದರೇನು?
2. ಸಮಯದ ಬಗ್ಗೆ ಪೀಟರ್ ಡ್ರೂಕರ್‌ನ ಅಭಿಪ್ರಾಯವೇನು?
3. ಪ್ರೇರಿತ ಜನನ ಪಡೆದ ಪ್ರಮುಖ ವ್ಯಕ್ತಿಗಳನ್ನು ಹೆಸರಿಸಿ.
4. ಮುಖಂಡ ಎಂದರೆ ಯಾರು?
5. ಸಾರ್ವತ್ರಿಕವಾದ ಎಂದರೇನು?



**VI. ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರಿಸಿರಿ: 5x2=10**

1. ಪರ ಸಂವೇದನಾ ಶಿಲತೆ ಎಂದರೇನು? ಅದರ ಅವಶ್ಯಕತೆ ಏನು?
2. ಗೆಳೆತನ ಉಳಿಸಿಕೊಳ್ಳಲು ಯಾವ ಅಂಶಗಳನ್ನು ಗಮನಿಸುವುದು ಅಗತ್ಯ.
3. ದೀನತೆ ಒಂದು ಸುಗುಣ. ಕಾರಣಗಳೇನು?
4. ಮದರ್ ತೆರೇಜಾರವರು ಜೀವಂತ ಸಂತರೆಂದು ಪ್ರಖ್ಯಾತರಾಗಲು ಕಾರಣವೇನು?
5. ಮುಖಂಡನಲ್ಲಿರಬೇಕಾದ ಮುಖ್ಯ ಗುಣ ಲಕ್ಷಣಗಳು ಯಾವುವು?
6. ಭಾರತ ಒಂದೇ ದೇಶವಾದರೂ ಅದು ಅನೇಕ ರಾಜ್ಯಗಳಾಗಿ ಬೇರ್ಪಡಿಲಾಗಿದೆ ಏಕೆ?
7. ಮಾನವ ಹಕ್ಕುಗಳು ಸಾರ್ವತ್ರಿಕವಾದವುಗಳು ಏಕೆ?

**VII. ಯಾವುದಾದರೂ ಆರು ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ: 6x3=18**

1. ಸಾಮಾಜಿಕ ಪರಿಜ್ಞಾನಗಳ ತೋರಿಕೆಗಳನ್ನು ಪಟ್ಟಿ ಮಾಡಿರಿ.
2. ಸಂವೇದಿಸುತ್ತಿರುವಾಗ ನೀವೇನು ಮಾಡುತ್ತೀರಿ.
3. ಸಮಯದ ಉಪಯುಕ್ತ ಬಳಕೆ ಮಾಡಿಕೊಳ್ಳಲು ಏನು ಮಾಡಬೇಕು.
4. ಗೆಳೆತನ ಕಾಪಾಡುವ ಸೂತ್ರಗಳನ್ನು ತಿಳಿಸು.
5. ಮುಖಂಡತ್ವದ ಅಗತ್ಯ ಲಕ್ಷಣಗಳು ಯಾವುವು?
6. ಪ್ರಜಾಪ್ರಭುತ್ವ ಸರಕಾರ ಕಾರ್ಯರೂಪಕ್ಕೆ ತರುವ ಆರು ಬಗೆಯ ಹಕ್ಕುಗಳು ಯಾವುವು?
7. ಡಾ. ಅಂಬೇಡ್ಕರ್ ರವರಿಗೆ ದಲಿತರ ವಿಮೋಚನೆಗಾಗಿ ಸಮರ್ಪಣಾ ಭಾವದಿಂದ ದುಡಿಯಲು ಪ್ರಚೋದಿಸಿದ ಘಟನೆ ಯಾವುದು.

**VIII. ಯಾವುದಾದರೂ ಎರಡು ವಿಷಯಗಳ ಬಗ್ಗೆ ವಿವರಿಸಿ ಬರೆಯಿರಿ: 2x5=10**

1. ಸಮಯ ಎಂದರೆ ಹಣ
2. ಗೆಳೆಯ ಕನ್ನಡಿಯಂತೆ
3. ವೈವಿಧ್ಯತೆ ಜೀವನಕ್ಕೆ ಹೊಸತನವನ್ನು ತರುತ್ತದೆ.

**IX. ಕೆಳಗಿನ ಯಾವುದಾದರೂ ಎರಡು ಸಮಸ್ಯೆಗಳಿಗೆ ಪರಿಹಾರ ನೀಡಿರಿ: 2x6=12**

1. ಕವಿತ ಮತ್ತು ಸವಿತ 10ನೇ ತರಗತಿಯ ವಿದ್ಯಾರ್ಥಿನಿಯರು ಹಾಗೂ ಒಡನಾಟದ ಗೆಳೆಯರು. ಕವಿತ ತನ್ನ ಸಹಪಾಠಿಗಳೊಂದಿಗೆ ಸವಿತ ನನ್ನ ಆತ್ಮಿಯ ಗೆಳತಿ ಎಂದು ಹೇಳಿಕೊಳ್ಳುತ್ತಿರುತ್ತಾಳೆ ಮಾತ್ರವಲ್ಲ ಕಲಿಕೆಯಲ್ಲಿ ಹಾಗೂ ಇತರ ಪಠ್ಯೇತರ ಚಟುವಟಿಕೆಗಳಲ್ಲಿ ಸವಿತಳ ನೆರವನ್ನು ಪಡೆದಿರುತ್ತಾಳೆ. ಆದರೆ ಸವಿತಳಿಗೆ ಪರೀಕ್ಷೆಯಲ್ಲಿ ಹೆಚ್ಚು ಅಂಕ ಬಂದಾಗ ಬೇಸರ ಪಟ್ಟುಕೊಳ್ಳುತ್ತಾಳೆ ಮತ್ತು ಕ್ಲಾಸಿನಲ್ಲಿ ಸವಿತ ಏನಾದರೂ ತಪ್ಪು ಮಾಡಿ ಶಿಕ್ಷಕರ ಕೈಯಲ್ಲಿ ಸಿಕ್ಕಿ ಬಿದ್ದಾಗ ಸಂತೋಷ ಪಟ್ಟುಕೊಳ್ಳುತ್ತಾಳೆ.